ವಿಷಯಾನುಕ್ರಮಣಿಕೆ

ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – ೫೭೩ ೨೧೧
೨೦೦೨
ದೂರವಾಣಿ: ೦೮೧೭೫–೭ ೩೮೨೦

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ದಶಶ್ಲೋಕಿ

ಸಂಸ್ಕೃತಮೂಲ, ಅನುವಾದ, ವಿವರಣೆ, ಟಿಪ್ಪಣಿ – ಮುಂತಾದವುಗಳೊಡನೆ

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೮

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ
೨೦೦೨

ಮೊದಲನೆಯ ಸಂಸ್ಕರಣ ೧೯೫೬ (೧೦೦೦ ಪ್ರತಿಗಳು)
ಎರಡನೆಯ ಸಂಸ್ಕರಣ ೨೦೦೨ (೧೦೦೦ ಪ್ರತಿಗಳು)

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೪೫, ೩ನೇ ಮುಖ್ಯರಸ್ತೆ, ನಾಗಸಂದ್ರ
ತ್ಯಾಗರಾಜನಗರ ಅಂಚೆ, ಬೆಂಗಳೂರು – ೫೬೦ ೦೨೮
✆ ೬೭೬೪೬೫೦

ಮುದ್ರಣಸ್ಥಾನ :
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರ ಮಠದ ರಸ್ತೆ, ಶಂಕರಪುರಂ
ಬೆಂಗಳೂರು – ೫೬೦ ೦೦೪
✆ ೬೫೨೧೫೨೭

# ಪೀಠಿಕೆ

ಈ ದಶಶ್ಲೋಕಿಯು ಶಂಕರಾಚಾರ್ಯರ ಕೃತಿಯೆಂದು ಸುಪ್ರಸಿದ್ಧವಾಗಿರುತ್ತದೆ ಯಾದರೂ ಇದನ್ನು ಮಧುಸೂದನಸರಸ್ವತಿಗಳಿಗಿಂತ ಹಿಂದಿನ ವೇದಾಂತಿಗಳು ಯಾರೂ ಪರಾಮರ್ಶಿಸಿರುವದು ಕಂಡುಬರುವದಿಲ್ಲ.

ಮಧುಸೂದನಸರಸ್ವತಿಗಳ ''ಸಿದ್ಧಾಂತಬಿಂದು'' ಅದರ ಮೇಲೆ ಗೌಡಬ್ರಹ್ಮಾನಂದರು ಬರೆದಿರುವ '' ನ್ಯಾಯರತ್ನಾವಲಿ''– ಇವೆರಡರಿಂದ ಈ ಗ್ರಂಥಕ್ಕೆ ಹೆಚ್ಚಿನ ಪ್ರಾಶಸ್ತ್ಯವು ಬಂದಿರುತ್ತದೆ. ಆ ಗ್ರಂಥಗಳಲ್ಲಿ ಅರ್ವಾಚೀನವ್ಯಾಖ್ಯಾನಪ್ರಸ್ಥಾನದ ಅನೇಕ ವಿಷಯಗಳನ್ನು ವಿಚಾರಮಾಡಿರುತ್ತದೆ. ಆದರೆ ಪ್ರಕೃತದಲ್ಲಿ ನಾನು ಬರೆದಿರುವ ಸಂಕ್ಷೇಪವಿವರವು ಸ್ವತಂತ್ರವಾಗಿರುತ್ತದೆ.

ಈ ಗ್ರಂಥವು ಆಚಾರ್ಯರದ್ದೆಂದು ನಿಶ್ಚಯಿಸುವದಕ್ಕೆ ಆಧಾರವು ಇನ್ನೂ ಸಿಕ್ಕಿಲ್ಲವಾದರೂ ಸಿದ್ಧಾಂತವಿರುದ್ಧವಾದ ವಿಷಯಗಳು ಯಾವವೂ ಕಾಣಬರುತ್ತಿಲ್ಲ. ಐತಿಹಾಸಿಕದೃಷ್ಟಿಯಿಂದ ಇದರ ಸ್ಥಾನವನ್ನು ನಿರ್ಣಯಿಸುವದು ವಿದ್ವಾಂಸರಿಗೆ ಸೇರಿದ್ದಾಗಿರುತ್ತದೆ.

ಈ ಗ್ರಂಥವನ್ನು ಓದುವದರಿಂದ ಜಿಜ್ಞಾಸುಗಳಿಗೆ ಪ್ರಯೋಜನವುಂಟೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ದುರ್ಮುಖಿಸಂವತ್ಸರ,
ಜ್ಯೇಷ್ಠ ಶುದ್ಧ ೧೩, ೧೯೫೬ ಅನುವಾದಕ.

-----

# ವಿಷಯಾನುಕ್ರಮಣಿಕೆ


| | ಪುಟ |
|---|---|
| ಆತ್ಮನು ಅದ್ವಿತೀಯನೆಂಬುದು ಸುಷುಪ್ತಿಸಿದ್ಧ | ೧ |
| ಆತ್ಮನಿಗೆ ಕರ್ಮಯೋಗಗಳ ಸಂಬಂಧವಿಲ್ಲ | ೧ |
| ಆತ್ಮನಿಗೆ ಕರ್ಮಸಂಬಂಧವೇ ಇಲ್ಲವೆಂಬುದಕ್ಕೆ ಸುಷುಪ್ತಿಯ ಆಧಾರ | ೨ |
| ಆತ್ಮಸ್ವರೂಪವು ಅದ್ವಿತೀಯಬ್ರಹ್ಮವೇ, ಮತಾಂತರಸಮ್ಮತಜಗತ್ಕಾರಣವಲ್ಲ | ೩ |
| ಆತ್ಮನಿಗೆ ದೇಶಾದಿಪರಿಚ್ಛೇದವಿಲ್ಲ | ೪ |
| ಆತ್ಮನು ನಿರ್ಧರ್ಮಕನು | ೪ |
| ಬ್ರಹ್ಮವು ನಿರ್ವಿಕಲ್ಪವು | ೫ |
| ಆತ್ಮನು ನಿರವಸ್ಥನು | ೫ |
| ಆತ್ಮನು ನಿತ್ಯನಿಷ್ಪ್ರಪಂಚನು | ೬ |
| ವೇದಾಂತಸಿದ್ಧವಾದ ಆತ್ಮತತ್ತ್ವವು ಮನೋವಾಗತೀತ | ೬ |

|| ಓಮ್ ||

# ದಶಶ್ಲೋಕೀ

## ಆತ್ಮನು ಅದ್ವಿತೀಯನೆಂಬುದು ಸುಷುಪ್ತಿಸಿದ್ಧ

ನ ಭೂಮಿರ್ನ ತೋಯಂ ನ ತೇಜೋ ನ ವಾಯು
ರ್ನ ಖಂ ನೇನ್ದ್ರಿಯಂ ವಾ ನ ತೇಷಾಂ ಸಮೂಹಃ ।
ಅನೈಕಾನ್ತಿಕತ್ವಾತ್ ಸುಷುಪ್ತ್ಯೇಕಸಿದ್ಧ-
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ||೧||

೧. (ನಾನು) ಪೃಥ್ವಿಯಲ್ಲ, ಅಪ್ಪಲ್ಲ, ತೇಜಸ್ಸಲ್ಲ, ವಾಯುವಲ್ಲ, ಆಕಾಶವಲ್ಲ, ಇಂದ್ರಿಯವಲ್ಲ, ಅವುಗಳ ಸಮೂಹವೂ ಅಲ್ಲ, ಏಕೆಂದರೆ ಅವು ಅನೈಕಾಂತಿಕವಾಗಿವೆ.[1] ಆದ್ದರಿಂದ ಸುಷುಪ್ತಿಯಲ್ಲಿ ತಾನೊಬ್ಬನೇ ಉಳಿದು[2] ಸಿದ್ಧನಾಗಿರುವ ಕೇವಲ ಶಿವನೇ ನಾನು.

ವಿವರ

ನಾನು, ನಾನು – ಎಂದು ನಾವು ಕರೆದುಕೊಳ್ಳುತ್ತಿರುವ ವಸ್ತುವು ಯಾವದೆಂಬುದನ್ನು ವಿಚಾರಿಸಿದರೆ ಪಂಚಭೂತಗಳಾಗಲಿ, ಅವುಗಳಿಂದಾದ ಶರೀರವಾಗಲಿ, ಇಂದ್ರಿಯವಾಗಲಿ ನಾವಲ್ಲವೆನ್ನಬೇಕು. ಏಕೆಂದರೆ ಭೌತಿಕಗಳಾಗಿರುವ ಕಾರ್ಯಕರಣಗಳ ಸಂಘಾತವು ಎಚ್ಚರದಲ್ಲಿದ್ದರೂ ಕನಸಿನಲ್ಲಿರುವದಿಲ್ಲ, ಸುಷುಪ್ತಿಯಲ್ಲಿ ಯಾವ ದೃಶ್ಯವೂ ಇರುವದೇ ಇಲ್ಲ, ಆದ್ದರಿಂದ ಅವು ಅನೈಕಾಂತಿಕವಾಗಿವೆ, ಎಂದರೆ ನಿಯಮವಾಗಿ ನಮ್ಮ ಸ್ವರೂಪಕ್ಕೆ ಸೇರಿಲ್ಲ. ಸುಷುಪ್ತಿಯಲ್ಲಿ ಮತ್ತೆ ಯಾವದೂ ಇಲ್ಲದಿದ್ದರೂ ನಮ್ಮ ಸ್ವರೂಪವಾದ ಸಾಕ್ಷಿಚೈತನ್ಯವು ಮಾತ್ರ ಇರುತ್ತದೆ. ಆ ಶಿವಸ್ವರೂಪವೇ ನಾನೆಂಬುದು ಎಂದು ಅಭಿಪ್ರಾಯ.

## ಆತ್ಮನಿಗೆ ಕರ್ಮಯೋಗಗಳ ಸಂಬಂಧವಿಲ್ಲ

ನ ವರ್ಣಾ ನ ವರ್ಣಾಶ್ರಮಾಚಾರಧರ್ಮಾ
ನ ಮೇ ಧಾರಣಾಧ್ಯಾನಯೋಗಾದಯೋಽಪಿ ।
ಅನಾತ್ಮಾಶ್ರಯಾಹಂಮಮಾಧ್ಯಾಸಹಾನಾ-
ತ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ || ೨ ||

---

1. ವ್ಯಭಿಚರಿತಸ್ವರೂಪವುಳ್ಳವಾಗಿವೆ, ಒಂದೇ ಸ್ವರೂಪದಲ್ಲಿ ತೋರುತ್ತಿರುವದಿಲ್ಲ ಎಂದರ್ಥ.
2. ಮಿಕ್ಕದ್ದೆಲ್ಲವೂ ಇಲ್ಲವಾದರೂ ತಾನೊಬ್ಬನೇ ಉಳಿದುಕೊಂಡಿರುವ ಎಂದರ್ಥ.

೨. ನನಗೆ ವರ್ಣಗಳಿಲ್ಲ, ವರ್ಣಾಶ್ರಮಾಚಾರಧರ್ಮಗಳೂ ಇಲ್ಲ ; ಧಾರಣಾ, ಧ್ಯಾನ, ಯೋಗ – ಮುಂತಾದವೂ ಇಲ್ಲ. ಏಕೆಂದರೆ ಅನಾತ್ಮವನ್ನಾಶ್ರಯಿಸಿಕೊಂಡಿರುವ ನಾನು, ನನ್ನದು ಎಂಬ ಅಧ್ಯಾಸವು ನಾಶವಾಗಿಬಿಟ್ಟಿರುತ್ತದೆ. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನೇ ನಾನು.

### ವಿವರ

ಸುಷುಪ್ತಿಯಲ್ಲಿ ಅದ್ವಿತೀಯವಾಗಿರುವಂತೆಯೇ ನಮ್ಮ ಸ್ವರೂಪವು ಎಚ್ಚರದಲ್ಲಿಯೂ ಇರುತ್ತದೆ. ಏಕೆಂದರೆ ಬ್ರಾಹ್ಮಣಾದಿವರ್ಣಗಳೂ ಅವುಗಳ ಕರ್ಮಗಳೂ ದೇಹಕ್ಕೆ ಸಂಬಂಧಪಟ್ಟವುಗಳು. ಆದರೆ ದೇಹವು ಅನಾತ್ಮವಾಗಿದೆ, ಅದನ್ನು ನೋಡುವ ಆತ್ಮನು ಅದಕ್ಕಿಂತ ಬೇರೆಯಾಗಿರುತ್ತಾನೆ. ಹೀಗೆಯೇ ಧಾರಣೆ ಎಂದರೆ ಮನಸ್ಸನ್ನು ಎಲ್ಲಿಯಾದರೂ ನಿಲ್ಲಿಸಿಕೊಳ್ಳುವದು ; ಧ್ಯಾನಯೋಗ ಎಂದರೆ ಒಂದೇ ವಸ್ತುವನ್ನು ಎಡೆಬಿಡದೆ ಚಿಂತಿಸುವದು – ಇವು ಅಂತಃಕರಣಕ್ಕೆ ಸೇರಿದವು. ಅಂತಃಕರಣವೂ ಅನಾತ್ಮವಾಗಿರುತ್ತದೆ. ಅನಾತ್ಮವಾದ ದೇಹೇಂದ್ರಿಯಮನಸ್ಸುಗಳನ್ನು ನಾನು, ನನ್ನದು – ಎಂದು ಅಧ್ಯಾಸದಿಂದ ತಪ್ಪುತಿಳಿದುಕೊಳ್ಳುವವರಿಗೆ ಕರ್ಮೋಪಾಸನೆಗಳಿರಬಹುದು. ಎಲ್ಲವನ್ನೂ ನೋಡುವ ಸಾಕ್ಷಿಯೇ ತಾನೆಂದು ತಿಳಿದವನಿಗೆ ಅವು ಹೇಗೆ ಇದ್ದಾವು ?

## ಆತ್ಮನಿಗೆ ಕರ್ಮಸಂಬಂಧವೇ ಇಲ್ಲವೆಂಬುದಕ್ಕೆ ಸುಷುಪ್ತಿಯ ಆಧಾರ

ನ ಮಾತಾ ಪಿತಾ ವಾ ನ ದೇವಾ ನ ಲೋಕಾ
ನ ವೇದಾ ನ ಯಜ್ಞಾ ನ ತೀರ್ಥಂ ಬ್ರುವನ್ತಿ ।
ಸುಷುಪ್ತೌ ನಿರಸ್ತಾತಿಶೂನ್ಯಾತ್ಮಕತ್ವಾತ್
ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೩ ॥

೩. (ನನಗೆ) ತಾಯಿಯಿಲ್ಲ, ತಂದೆಯಿಲ್ಲ, ದೇವತೆಗಳಿಲ್ಲ, ಲೋಕಗಳಿಲ್ಲ, ವೇದಗಳಿಲ್ಲ, ಯಜ್ಞಗಳಿಲ್ಲ, ತೀರ್ಥವೂ ಇಲ್ಲವೆನ್ನುವರು.[1] ಸುಷುಪ್ತಿಯಲ್ಲಿ ಅತಿಶೂನ್ಯಾತ್ಮಕತ್ವವನ್ನು[2] ನಿರಾಸಮಾಡಿರುವದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನೇ ನಾನು.

---

1. 'ಬ್ರುವನ್ತಿ' ಎಂಬ ಮಾತಿಗೆ ಚೆನ್ನಾಗಿ ಅನ್ವಯವಾಗುವಂತಿಲ್ಲ ; ವ್ಯಾಖ್ಯಾನಕಾರರು 'ಸುಷುಪ್ತೌ ನ ಬ್ರುವನ್ತಿ' ಎಂದು ಅನ್ವಯಿಸಿ 'ಸುಷುಪ್ತಿಯಲ್ಲಿ ಇಲ್ಲವೆನ್ನುವರು' ಎಂಬರ್ಥವನ್ನು ತೆಗೆದಿರುತ್ತಾರೆ.

2. 'ಶೂನ್ಯಾತ್ಮಕತ್ವಾತ್' ಎಂದಿದ್ದರೇ ಸಾಕಾಗಿರುವಾಗ ಅತಿಶೂನ್ಯಾತ್ಮಕತ್ವಾತ್ ಎಂದು ಏಕೆ ಬರೆದಿದೆ ಎಂಬುದು ವಿಚಾರಣೀಯವಾಗಿದೆ.

ವಿವರ

ಯಾವನಿಗಾದರೂ ಕರ್ಮಾದಿಗಳ ಸಂಬಂಧವು ತಾಯಿ, ತಂದೆ – ಮುಂತಾದವರ ಸಂಬಂಧದಿಂದ ಬರುತ್ತದೆ. ಆದರೆ ಆತ್ಮನಿಗೆ ತಾಯಿ, ತಂದೆ – ಮುಂತಾದವರ ಸಂಬಂಧವು ಇಲ್ಲವೇ ಇಲ್ಲ. ಸುಷುಪ್ತಿಯಲ್ಲಿ ತಂದೆ, ತಾಯಿ, ಲೋಕಗಳು, ದೇವತೆಗಳು, ವೇದಗಳು – ಮುಂತಾದವುಗಳಿಗೆ ಪಿತೃತ್ವವೇ ಮುಂತಾದವು ಹೋಗಿಬಿಟ್ಟಿರುತ್ತವೆ. ಏಕಂದರೆ ಕರ್ಮವೆಂಬ ನಿಮಿತ್ತವು ಆಗ ಇರುವದೇ ಇಲ್ಲ – ಹೀಗೆಂದು ಬೃ.೪–೩–೨೨ರಲ್ಲಿ ಹೇಳಿದೆ. 'ಯಾವ ಕರ್ಮದ ಸಂಬಂಧವೂ ಇಲ್ಲದ ಆತ್ಮಸ್ವರೂಪವು ಸುಷುಪ್ತಿಯಲ್ಲಿ ಇದೆ ಎಂಬುದಾದರೂ ಹೇಗೆ? ಅದು ಅಲ್ಲಿ ಶೂನ್ಯವೇ ಆಗಿರುತ್ತದೆಯೆನ್ನಬೇಕಲ್ಲವೆ ?' ಎಂದರೆ ಹಾಗಲ್ಲ : ಅಲ್ಲಿ ನಮಗೆ ಏನೂ ತಿಳಿಯುವದಿಲ್ಲವಾದ್ದರಿಂದ ಶೂನ್ಯವನ್ನು ಮೀರಿದ, ಏನೂ ಇರಲಿಲ್ಲವೆಂಬುದನ್ನು ಕಾಣುವ, ಸಾಕ್ಷಿಸ್ವರೂಪವೇ ಇತ್ತೆಂದು ಹೇಳುವದೇ ಯುಕ್ತ.

## ಆತ್ಮಸ್ವರೂಪವು ಅದ್ವಿತೀಯಬ್ರಹ್ಮವೇ,<br>ಮತಾಂತರಸಂಮತಜಗತ್ಕಾರಣವಲ್ಲ

**ನ ಸಾಂಖ್ಯಂ ನ ಶೈವಂ ನ ತತ್ಪಾಂಚರಾತ್ರಂ**<br>
**ನ ಜೈನಂ ನ ಮೀಮಾಂಸಕಾದೇರ್ಮತಂ ವಾ ।**<br>
**ವಿಶಿಷ್ಟಾನುಭೂತ್ಯಾ ವಿಶುದ್ಧಾತ್ಮಕತ್ವಾತ್**<br>
**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೪ ॥**

೪. ಆ (ಆತ್ಮತತ್ತ್ವವು) ಸಾಂಖ್ಯವಲ್ಲ, ಶೈವವಲ್ಲ, ಪಾಂಚರಾತ್ರವಲ್ಲ, ಜೈನವಲ್ಲ, ಮೀಮಾಂಸಕಾದಿಸಂಮತವಾದದ್ದೂ ಅಲ್ಲ ; ಏಕೆಂದರೆ ಅದು ವಿಶಿಷ್ಟವಾದ ಅನುಭೂತಿಯಿಂದ ವಿಶುದ್ಧಸ್ವರೂಪವಾಗಿರುತ್ತದೆ. ಆದ್ದರಿಂದ ತಾನೊಬ್ಬನೇ ಉಳಿದಿರುವ ಕೇವಲ ಶಿವನೇ ನಾನು.

ವಿವರ

ಸಾಂಖ್ಯರು ಪ್ರಧಾನವೇ ಜಗತ್ತಿಗೆ ಉಪಾದಾನಕಾರಣವೆನ್ನುವರು. ಶೈವರು ಪ್ರಕೃತಿಯೇ ಜಗತ್ತಿಗೆ ಉಪಾದಾನಕಾರಣವಾದರೂ ಪಶುಪತಿಯು ನಿಮಿತ್ತಕಾರಣನೆನ್ನುವರು. ಪಾಂಚರಾತ್ರರು ಭಗವಂತನಿಂದ ಜೀವನು ಹುಟ್ಟಿ ಆತನ ಆರಾಧನೆಯಿಂದ ಭಗವತ್ಸಾಯುಜ್ಯವನ್ನು ಪಡೆದುಕೊಳ್ಳುವನೆನ್ನುವರು. ಜೈನರು ಜಗತ್ಕಾರಣನಾದ ಈಶ್ವರನೇ ಇಲ್ಲ, ಜೀವನು ಕರ್ಮಮುಕ್ತನಾದರೆ ಪರಮಾತ್ಮನೆನಿಸುವನು ಎನ್ನುವರು. ಮೀಮಾಂಸಕರು ಕರ್ಮವೇ ಕರ್ಮಫಲವನ್ನು ಕೊಡುತ್ತದೆ, ಈಶ್ವರನಲ್ಲ – ಎನ್ನುವರು. ಸೌಗತರು ಆತ್ಮನೂ ಇಲ್ಲ, ಈಶ್ವರನೂ ಇಲ್ಲ – ಎನ್ನುವರು. ಇವೆಲ್ಲಕ್ಕಿಂತಲೂ ವಿಲಕ್ಷಣವಾಗಿರುವ ಸರ್ವಾತ್ಮನಾಗಿರುವ

ಸಾಕ್ಷಿಸ್ವರೂಪನಾದ ಈಶ್ವರನೇ ನಾನೆಂಬ ಅನುಭವವನ್ನು ವೇದಾಂತವಾಕ್ಯವು ತಂದುಕೊಡುತ್ತದೆ. ಅನುಭವಾವಸಾನವಾಗಿರುವ ಈ ವಾಕ್ಯವನ್ನು ತಿರಸ್ಕರಿಸುವದಕ್ಕೆ ಯಾವ ಕಾರಣವೂ ಇಲ್ಲ.

## ಆತ್ಮನಿಗೆ ದೇಶಾದಿಪರಿಚ್ಛೇದವಿಲ್ಲ

ನ ಚೋರ್ಧ್ವಂ ನ ಚಾಧೋ ನ ಚಾನ್ತರ್ನ ಬಾಹ್ಯಂ
ನ ಮಧ್ಯಂ ನ ತಿರ್ಯಙ್ನ ಪೂರ್ವಾ ಪರಾ ದಿಕ್ ।
ವಿಯದ್ವ್ಯಾಪಕತ್ವಾದಖಣ್ಡೈಕರೂಪ-
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೫ ॥

೫. ಮೇಲುಗಡೆಯಿಲ್ಲ, ಕೆಳಗೆ ಇಲ್ಲ ; ಒಳಗೆ ಇಲ್ಲ, ಹೊರಗೂ ಇಲ್ಲ; ನಡುವೆಯೂ ಇಲ್ಲ. ಅಡ್ಡಲಾಗಿಲ್ಲ, ಪೂರ್ವಪಶ್ಚಿಮದಿಕ್ಕುಗಳಲ್ಲಿಯೂ ಇಲ್ಲ. ಆಕಾಶವನ್ನು ಕೂಡ ವ್ಯಾಪಿಸಿಕೊಂಡಿರುವದರಿಂದ ಅಖಂಡವಾದ ಏಕರೂಪನಾಗಿರುವವನು. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನು ನಾನು.

### ವಿವರ

ಆತ್ಮನಿಗೆ ಯಾವ ಪರಿಚ್ಛೇದವೂ ಇರುವದಿಲ್ಲ. 'ಮುಂದೆ ಕಾಣುವದು ಬ್ರಹ್ಮವು, ಹಿಂದೆ ಬ್ರಹ್ಮವು, ಬಲಕ್ಕೆ ಬ್ರಹ್ಮವು, ಎಡಕ್ಕೆ ಬ್ರಹ್ಮವು, ಕೆಳಗೆ ಮೇಲೆ ಎಲ್ಲೆಲ್ಲಿಯೂ ವ್ಯಾಪಿಸಿರುವದು ಬ್ರಹ್ಮವೇ, ಇವೆಲ್ಲವೂ ವರಿಷ್ಠವಾದ ಬ್ರಹ್ಮವೇ' (ಮುಂ. ೨-೨-೧೨) ಎಂದು ಶ್ರುತಿಯು ಸಾರುತ್ತಿರುವದು. ಆಕಾಶ, ಕಾಲ - ಮುಂತಾದದ್ದೆಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಅಖಂಡವಾದ ಬ್ರಹ್ಮಕ್ಕಿಂತ ಬೇರೆಯಾದದ್ದು ಯಾವದೂ ಇಲ್ಲವೇ ಇಲ್ಲ. ಅದೇ ನಮ್ಮ ಆತ್ಮನು.

## ಆತ್ಮನು ನಿರ್ಧರ್ಮಕನು

ನ ಶುಕ್ಲಂ ನ ಕೃಷ್ಣಂ ನ ರಕ್ತಂ ನ ಪೀತಂ
ನ ಕುಬ್ಜಂ ನ ಪೀನಂ ನ ಹ್ರಸ್ವಂ ನ ದೀರ್ಘಮ್ ।
ಅರೂಪಂ ತಥಾ ಜ್ಯೋತಿರಾಕಾರಕತ್ವಾತ್
ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೬ ॥

೬. (ಆತ್ಮತತ್ತ್ವವು) ಬಿಳಿಯದಲ್ಲ, ಕಪ್ಪಲ್ಲ ; ಕೆಂಪಲ್ಲ, ಹಳದಿಯಲ್ಲ; ಸಣ್ಣದಲ್ಲ, ದೊಡ್ಡದಲ್ಲ; ಮೋಟಲ್ಲ, ಉದ್ದವೂ ಅಲ್ಲ. ಹಾಗೆಯೇ ಅದು ಯಾವ ರೂಪವೂ ಇಲ್ಲದ್ದು, ಏಕೆಂದರೆ ಚೈತನ್ಯಜ್ಯೋತಿಯ ಸ್ವರೂಪವಾಗಿರುತ್ತದೆ. ಆದ್ದರಿಂದ ತಾನೊಬ್ಬನೇ ಉಳಿದಿರುವ ಕೇವಲ ಶಿವನು ನಾನು.

### ವಿವರ

ಆತ್ಮನಲ್ಲಿ ಯಾವ ಅನಾತ್ಮವಸ್ತುವಿನ ಧರ್ಮವೂ ಇಲ್ಲ. ಏಕೆಂದರೆ ಅದು ಎಲ್ಲವನ್ನೂ ಬೆಳಗುವ ಸಾಕ್ಷಿಚೈತನ್ಯವಾಗಿರುತ್ತದೆ. ಆದ್ದರಿಂದ ನಿರ್ಧರ್ಮಕವಾದರೂ ಅದು ಇಲ್ಲವೆನ್ನುವದಕ್ಕೆ ಆಗುವದಿಲ್ಲ.

## ಬ್ರಹ್ಮವು ನಿರ್ವಿಕಲ್ಪವು

**ನ ಶಾಸ್ತಾ ನ ಶಾಸ್ತ್ರಂ ನ ಶಿಷ್ಯೋ ನ ಶಿಕ್ಷಾ**
**ನ ಚ ತ್ವಂ ನ ಚಾಽಹಂ ನ ಚಾಽಯಂ ಪ್ರಪಞ್ಚಃ ।**
**ಸ್ವರೂಪಾವಬೋಧೋ ವಿಕಲ್ಪಾಸಹಿಷ್ಣು-**
**ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೭ ॥**

೭. (ನಾನು) ಗುರುವಲ್ಲ, ಶಾಸ್ತ್ರವಲ್ಲ, ಶಿಷ್ಯನಲ್ಲ, ಶಿಕ್ಷಣವೂ ಅಲ್ಲ, ನೀನಲ್ಲ, ನಾನಲ್ಲ, ಈ ಪ್ರಪಂಚವೂ ಅಲ್ಲ. ಯಾವ ವಿಕಲ್ಪವನ್ನೂ ಸಹಿಸದ ಸ್ವರೂಪಚೈತನ್ಯವೇ ನಾನು. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನು ನಾನು.

### ವಿವರ

ಆತ್ಮನು ತಾನೊಬ್ಬನೇ ಇದ್ದು ಅದ್ವಿತೀಯನಾಗಿರುವನು. ಅವನಲ್ಲಿ ನಾನು, ನೀನು, ಇದು – ಎಂಬ ಭೇದವನ್ನು ಕಲ್ಪಿಸುವದಕ್ಕೆ ಬರುವದಿಲ್ಲ. ತೋರುವ ಭೇದಗಳೆಲ್ಲ ಆತ್ಮನಲ್ಲಿ ವಿಕಲ್ಪಮಾತ್ರವಾಗಿರುತ್ತವೆ. ಗುರುಶಿಷ್ಯಶಾಸ್ತ್ರವೆಂಬ ಭೇದವುಕೂಡ ನಿಜವಾಗಿ ಇರುವದಿಲ್ಲ; ಅದು ತತ್ತ್ವವನ್ನು ಉಪದೇಶಮಾಡಿಕೊಡುವದಕ್ಕೋಸ್ಕರ ಅಧ್ಯಾರೋಪದಿಂದ ಇಟ್ಟುಕೊಂಡಿರುವ ವಿಕಲ್ಪವು. ನಿಜವಾಗಿ ನಿರ್ವಿಕಲ್ಪವಾದ ಅದ್ವೈತಬ್ರಹ್ಮವೊಂದೇ ಇರತಕ್ಕದ್ದು, ಅದೇ ನಮ್ಮ ಆತ್ಮನು.

## ಆತ್ಮನು ನಿರವಸ್ಥನು

ನ ಜಾಗ್ರನ್ನ ಮೇ ಸ್ವಪ್ನಕೋ ವಾ ಸುಷುಪ್ತಿ –
ರ್ನ ವಿಶ್ವೋ ನ ವಾ ತೈಜಸಃ ಪ್ರಾಜ್ಞಕೋ ವಾ ।
ಅವಿದ್ಯಾತ್ಮಕತ್ವಾತ್ತ್ರಯಾಣಾಂ ತುರೀಯ–
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೮ ॥

೮. ನನಗೆ ಎಚ್ಚರವಿಲ್ಲ, ಕನಸಿಲ್ಲ, ತನಿನಿದ್ರೆಯಿಲ್ಲ ; ನಾನು ವಿಶ್ವನಲ್ಲ, ತೈಜಸನಲ್ಲ, ಪ್ರಾಜ್ಞನಲ್ಲ. ಏಕೆಂದರೆ ಇವು ಮೂರೂ ಅವಿದ್ಯಾತ್ಮಕವಾಗಿರುತ್ತವೆ. ನಾಲ್ಕನೆಯವನೇ ನಾನು. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನು ನಾನು.

ವಿವರ

ಆತ್ಮನು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳುಳ್ಳವನೆಂದು ಅವಿದ್ಯೆಯಿಂದ ತೋರುತ್ತಿರುತ್ತದೆ. ಆಯಾ ಅವಸ್ಥೆಯಲ್ಲಿಯೂ ಆವನು ವೈಶ್ವಾನರ, ಹಿರಣ್ಯಗರ್ಭ, ಪ್ರಾಜ್ಞ-ಎಂಬ ಹೆಸರಿನ ಪರಮಾತ್ಮನೇ ಎಂದು ಶ್ರುತಿಯಲ್ಲಿ ಹೇಳಿರುವದೂ ಅವಿದ್ಯಾದೃಷ್ಟಿಯಿಂದಲೇ. ನಿಜವಾಗಿ ಯಾವ ಅವಸ್ಥೆಯ ಹಂಗೂ ಇಲ್ಲದ ಅದ್ವೈತಾತ್ಮನೇ, ಪ್ರಪಂಚೋಪಶಮನಾದ ಶಿವನೇ, ನಮ್ಮ ಸ್ವರೂಪವು.

## ಆತ್ಮನು ನಿತ್ಯನಿಷ್ಪ್ರಪಂಚನು

ಅಪಿ ವ್ಯಾಪಕತ್ವಾದ್ಧಿತತ್ವಪ್ರಯೋಗಾತ್
ಸ್ವತಃಸಿದ್ಧಭಾವಾದನನ್ಯಾಶ್ರಯತ್ವಾತ್
ಜಗತ್ತುಚ್ಛಮೇತತ್ಸಮಸ್ತಂ ತದನ್ಯ
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥ ೯ ॥

೯. (ಆತ್ಮನು) ವ್ಯಾಪಕನಾಗಿರುವದರಿಂದಲೂ ಹಿತತ್ವದ ಸಂಬಂಧವಿರುವದರಿಂದಲೂ ಸ್ವತಃಸಿದ್ಧತ್ವವಿರುವದರಿಂದಲೂ ಅವನಿಗೆ ಮತ್ತೊಂದು ಆಶ್ರಯವಿಲ್ಲದ್ದರಿಂದಲೂ, ಅವನಿಗಿಂತ ಬೇರೆಯಾದ ಈ ಜಗತ್ತೆಲ್ಲವೂ ತುಚ್ಛವೇ. ಆದ್ದರಿಂದ ತಾನೊಬ್ಬನೇ ಎಲ್ಲವನ್ನೂ ಕಳೆದುಳಿದಿರುವ ಕೇವಲ ಶಿವನು ನಾನು.

ವಿವರ

ಆತ್ಮನು ಸರ್ವವ್ಯಾಪಕನು, ಅವನಿಂದ ವ್ಯಾಪ್ಯವಾಗದ ಜಗತ್ತು ಇಲ್ಲವೇ ಇಲ್ಲ. ಆತ್ಮನು ಎಲ್ಲಕ್ಕಿಂತಲೂ ಹಿತನಾದವನು, ಅಪ್ರಿಯವಾದ ಜಗತ್ತಿನ ಸಂಬಂಧವು ಅವನಿಗೆ ಇಲ್ಲ. ಅವನು ಸ್ವತಃಸಿದ್ಧಸ್ವರೂಪನು. ಅವನನ್ನವಲಂಬಿಸದೆ ಜಗತ್ತಿಗೆ ಸಿದ್ಧಿಯೇ ಇಲ್ಲ. ಆತ್ಮನಿಗೆ ಮತ್ತೊಂದು ಆಶ್ರಯವೇ ಇಲ್ಲ, ಅವನನ್ನಾಶ್ರಯಿಸಿಕೊಳ್ಳದಿದ್ದರೆ ಜಗತ್ತಿಗೆ ಇರವೇ ಇಲ್ಲ. ಹೀಗೆ ಆತ್ಮನು ಅದ್ವಿತೀಯನೇ, ಜಗತ್ತೆಂಬುದು ವಿಕಲ್ಪಮಾತ್ರವೇ – ಎಂದಾಯಿತು.

## ವೇದಾಂತಸಿದ್ಧವಾದ ಆತ್ಮತತ್ತ್ವವು ಮನೋವಾಗತೀತ

**ನ ಚೈಕಂ ತದನ್ಯದ್ದ್ವಿತೀಯಂ ಕುತಃ ಸ್ಯಾ–**
**ನ್ನ ವಾ ಕೇವಲತ್ವಂ ನ ಚಾಽಕೇವಲತ್ವಮ್ ।**
**ನ ಶೂನ್ಯಂ ನ ಚಾಽಶೂನ್ಯಮದ್ವೈತಕತ್ವಾತ್**
**ಕಥಂ ಸರ್ವವೇದಾನ್ತಸಿದ್ಧಂ ಬ್ರವೀಮಿ ॥ ೧೦ ॥**

೧೦. ಅದು ಒಂದೇ ಅಲ್ಲ, ಅದಕ್ಕೆ ಎರಡನೆಯದಾದ ಬೇರೊಂದು ಎಲ್ಲಿರಬೇಕು ? ಅದು ಒಂಟಿಯಲ್ಲ, ಮತ್ತೊಂದರ ಜೊತೆಯಿರುವದೂ ಅಲ್ಲ. ಅದು ಶೂನ್ಯವಲ್ಲ, ಅದ್ವೈತವಾಗಿರುವದರಿಂದ ಅಶೂನ್ಯವೂ ಅಲ್ಲ. ಸರ್ವ ವೇದಾಂತಗಳಲ್ಲಿ ಸಿದ್ಧವಾಗಿರುವ ಆತ್ಮತತ್ತ್ವವನ್ನು ಏನೆಂದು ಹೇಳಲಿ ?

ವಿವರ

ಆತ್ಮತತ್ತ್ವವು ಇಂಥದ್ದೆಂದು ಹೇಳುವದಕ್ಕಾಗಲಿ ಕಲ್ಪಿಸುವದಕ್ಕಾಗಲಿ ಬರುವಂತಿಲ್ಲ. ಏಕೆಂದರೆ ಮನೋವಾಕ್ಕುಗಳಿಗೆ ವಿಷಯವಾದದ್ದೆಲ್ಲವೂ ಅನಾತ್ಮವೇ, ಆತ್ಮವು ಒಂದೆಂದರೆ ಸಂಖ್ಯೆಯನ್ನು ಹೇಳಿದಂತೆ ಆಗುತ್ತದೆ ; ಆಗ ಅದಕ್ಕೆ ಎರಡನೆಯದೊಂದನ್ನು ಕಲ್ಪಿಸಬಹುದಾಗುತ್ತದೆ. ಅದು ಒಂಟಿಯಾಗಿದೆ ಎಂದರೆ ಮಿಕ್ಕದ್ದು ಬೇರೆ ಎಲ್ಲಿಯೋ ಇದೆ ಎಂದಂತೆ ಆಗುತ್ತದೆ. ಅದರ ಸ್ವರೂಪವನ್ನಾಗಲಿ ಗುಣವನ್ನಾಗಲಿ ಹೇಳುವದಕ್ಕೆ ಬರುವದಿಲ್ಲವೆಂದರೆ ಶೂನ್ಯವೆಂದಾಗುತ್ತದೆ, ಶೂನ್ಯವಲ್ಲವೆಂದರೆ ಶೂನ್ಯಕ್ಕಿಂತ ಬೇರೆಯಾದ ಅನಾತ್ಮವೆಂದಾಗುತ್ತದೆ. ಆದ್ದರಿಂದ ಹೇಗೂ ಹೇಳುವದಕ್ಕಾಗದ ಅದ್ವಿತೀಯತತ್ತ್ವವೆಂದೇ ತಿಳಿದು ಮನೋವಾಕ್ಪ್ರಪಂಚವನ್ನು ಅದಕ್ಕೆ ಹತ್ತಿಸಿಕೊಳ್ಳದೆ ಇರುವದೇ ಸರ್ವೋತ್ತಮ.

**ಓಂ ತತ್ಸತ್**

– – – – –

# ಶ್ಲೋಕಾನುಕ್ರಮಣಿಕೆ


| ಪ್ರತೀಕಗಳು | ಶ್ಲೋಕಸಂಖ್ಯೆ |
|---|---|
| ಅಪಿ ವ್ಯಾಪಕತ್ವಾತ್ | ೯ |
| ನ ಚೈಕಂ ತದನ್ಯತ್ | ೧೦ |
| ನ ಚೋರ್ಧ್ವಂ ನ ಚಾಧೋ | ೫ |
| ನ ಜಾಗ್ರನ್ನ ಮೇ ಸ್ವಪ್ನಕೋ | ೮ |
| ನ ಭೂಮಿರ್ನ ತೋಯಮ್ | ೧ |
| ನ ಮಾತಾ ಪಿತಾ ವಾ | ೩ |
| ನ ವರ್ಣಾ ನ ವರ್ಣಾಶ್ರಮಾಚಾರಧರ್ಮಾ | ೨ |
| ನ ಶಾಸ್ತಾ ನ ಶಾಸ್ತ್ರಮ್ | ೭ |
| ನ ಶುಕ್ಲಂ ನ ಕೃಷ್ಣಮ್ | ೬ |
| ನ ಸಾಂಖ್ಯಂ ನ ಶೈವಂ | ೪ |


# ಶಬ್ದಾನುಕ್ರಮಣಿಕೆ

* ಹೀಗೆ ನಕ್ಷತ್ರಚಿಹ್ನೆಗಳಿರುವ ಶಬ್ದಗಳು ಭಾಷ್ಯದಲ್ಲಿ ಪ್ರಚುರವಾಗಿಲ್ಲ.


೧. ***ಅಖಣ್ಡೈಕರೂಪ–**
ಕಡಿವಡಿಯದ ಒಂದೇ ರೂಪದ, ೫

೨. **ಅನನ್ಯಾಶ್ರಯ–**
ಮತ್ತೊಂದು ಆಸರೆಯಿಲ್ಲದ, ೯.

೩. **ಅವಿದ್ಯಾತ್ಮಕ–**
ಅವಿದ್ಯಾಕಲ್ಪಿತವಾದ, ೮.

೪. **ಅಹಂಮಮಾಧ್ಯಾಸಃ–**
ನಾನು, ನನ್ನದು ಎಂಬ ರೂಪದ ತಪ್ಪು ತಿಳಿವಳಿಕೆ, ೨.

೫. ***ನಿರಸ್ತಾತಿಶೂನ್ಯಾತ್ಮಕ–**
ಅತಿಶೂನ್ಯಸ್ವರೂಪವನ್ನು ಮೀರಿದ, ೩.

೬. **ಸರ್ವವೇದಾನ್ತಸಿದ್ಧ–**
ಎಲ್ಲಾ ಉಪನಿಷತ್ತುಗಳಿಂದಲೂ ಸಿದ್ಧವಾದ, ೧೦.

೭. **ಸುಷುಪ್ತ್ಯೇಕಸಿದ್ಧ–**
ತನಿನಿದ್ರೆಯೊಂದರಿಂದಲೇ ಸಿದ್ಧವಾಗುವ, ೧.

೮. **ಸ್ವರೂಪಾವಬೋಧಃ–**
ಸ್ವರೂಪಜ್ಞಾನ, ವೃತ್ತಿಜ್ಞಾನವಲ್ಲ ೭.

೯. **ಸ್ವತಃಸಿದ್ಧಭಾವಃ–**
ತಾನೇ ಸಿದ್ಧವಾಗಿರುವಿಕೆ, ಮತ್ತೊಂದರ ಹಂಗಿಲ್ಲದೆ ಇರುವಿಕೆ, ೯.

೧೦. ***ವಿಶಿಷ್ಟಾನುಭೂತಿಃ–**
ಅಸಾಧಾರಣವಾದ ಅನುಭವ, ೪.


---------

# ಸಂಸ್ಥಾಪಕರ ಸ್ಮರಣೆ



ಕರ್ನಾಟಕರಾಜ್ಯದ ಅಭಿನವ ಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ. ಸುಬ್ಬರಾವ್ ಎಂದಿತ್ತು. 1948 ರವರೆಗೆ (68 ನೆಯ ವಯಸ್ಸಿನವರೆಗೆ) ಅವರು **ಸುಬ್ರಾಯ**ರೆಂದೇ ಪ್ರಖ್ಯಾತರಾಗಿದ್ದರು. 10.6. 1948 ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷಸರಸ್ವತಿ** ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತ ವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ **ಅಭಿನವಶಂಕರಾಚಾರ್ಯ**ರಾಗಿ ಬಾಳಿ 1975ನೇ ಆಗಸ್ಟ್ 5 (1880- 1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**

**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**

**"ಓಂ ನಮೋ ಭಗವತೇ ಸಚ್ಚಿದಾನಂದಾಯ"**